## ಮಕ್ಕಳು ಮತ್ತು ತಾಯಂದಿರ ಮರಣ ದಾಖಲೆಗಳು (ಈ ವರ್ಷ ಜನವರಿ ಯಿಂದ ಡಿಸೆಂಬರ್ ವರೆಗೆ)

| ಮಕ್ಕಳ ಮರಣ | |
|---|---|
| ಹುಟ್ಟಿದ ಒಂದು ವಾರದೊಳಗೆ ಮರಣ | |
| ಹುಟ್ಟಿದ ಒಂದು ತಿಂಗಳೊಳಗೆ ಮರಣ | |
| ಹುಟ್ಟಿದ ಒಂದು ವರ್ಷದೊಳಗೆ ಮರಣ | |

| ಅಪೌಷ್ಠಿಕತೆ ಇರುವ ಮಕ್ಕಳ ವಯೋಮಾನ | ತೀವ್ರ ಅಪೌಷ್ಠಿಕ ಗಂಡು ಹೆಣ್ಣು | ಸಾಧಾರಣ ಅಪೌಷ್ಠಿಕ ಗಂಡು ಹೆಣ್ಣು | ಸಾಮಾನ್ಯ ಮಕ್ಕಳು ಗಂಡು ಹೆಣ್ಣು |
|---|---|---|---|
| 0-3 ವರ್ಷ | | | |
| 3-6 ವರ್ಷ | | | |
| 6-14 ವರ್ಷ | | | |
| 14-18 ವರ್ಷ | | | |
| ಒಟ್ಟು ಮಕ್ಕಳು | | | |

## ಮದುವೆಗಳು ಮತ್ತು ಮಕ್ಕಳ ಜನನ ವಿಚಾರಗಳು

| | |
|---|---|
| ಈ ವರ್ಷ ನಡೆದ ಒಟ್ಟು ಮದುವೆಗಳು | |
| ಇದರಲ್ಲಿ 18 ವರ್ಷಗಳಿಗಿಂತ ಕಡಿಮೆ ವಯಸ್ಸಿನವರಿಗಾದ ಮದುವೆಗಳು | |
| ಈ ವರ್ಷ ಆರೋಗ್ಯ ಕೇಂದ್ರದಲ್ಲಿ ವರದಿ ಆದಂತೆ ಎಷ್ಟು ಗರ್ಭಿಣಿಯರು ನೊಂದಾಯಿತರಾಗಿದ್ದರು ? | |
| 18 ವರ್ಷದೊಳಗಿನ ಗರ್ಭಿಣಿಯರ ಸಂಖ್ಯೆ | |
| ಈ ವರ್ಷ ಪಂಚಾಯತಿ ವ್ಯಾಪ್ತಿಯಲ್ಲಿ ಆದ ಒಟ್ಟು ಹೆರಿಗೆಗಳು | |
| ದಾದಿ ಅಥವಾ ವೈದ್ಯರ ಸಹಾಯವಿಲ್ಲದೆ ಆದ ಹೆರಿಗೆಗಳು | |
| ಒಟ್ಟು ಜನನ ಪ್ರಮಾಣ ಪತ್ರ ಪಡೆದವರ ಸಂಖ್ಯೆ | |
| ಒಟ್ಟು ಗರ್ಭಪಾತಗಳು | |

## ಅಂಗವಿಕಲತೆ ಇರುವ ಮಕ್ಕಳು

| ವಯಸ್ಸು | ಗಂಡು | ಹೆಣ್ಣು | ಒಟ್ಟು |
|---|---|---|---|
| ಈ ವರ್ಷ ಅಂಗವಿಕಲತೆಯೊಂದಿಗೆ ಹುಟ್ಟಿದ ಮಕ್ಕಳು | | | |
| 0-3 ವರ್ಷ ಅಂಗವಿಕಲತೆಯುಳ್ಳ ಮಕ್ಕಳು | | | |
| 3-6 ವರ್ಷ ಅಂಗವಿಕಲತೆಯುಳ್ಳ ಮಕ್ಕಳು | | | |
| 6-14 ವರ್ಷ ಅಂಗವಿಕಲತೆಯುಳ್ಳ ಮಕ್ಕಳು | | | |
| 14-18 ವರ್ಷ ಅಂಗವಿಕಲತೆಯುಳ್ಳ ಮಕ್ಕಳು | | | |
| ದೈಹಿಕ ಅಂಗವಿಕಲತೆ ಇರುವ ಮಕ್ಕಳ ಒಟ್ಟು ಸಂಖ್ಯೆ | | | |
| ಮಾನಸಿಕ ಅಂಗವಿಕಲತೆ ಇರುವ ಮಕ್ಕಳ ಒಟ್ಟು ಸಂಖ್ಯೆ | | | |

## ಅಂಗನವಾಡಿ ಮತ್ತು ಶಿಕ್ಷಣದಿಂದ ಹೊರಗುಆದಿರುವ ಮಕ್ಕಳು

| ವಯೋಮಾನ | ಗಂಡು | ಹೆಣ್ಣು | ಒಟ್ಟು |
|---|---|---|---|
| 0-3 ವರ್ಷ ಮಕ್ಕಳು ಐ.ಸಿ.ಡಿ.ಎಸ್ ಯೋಜನೆಗೆ ನೊಂದಣಿಯಾಗದೇ ಇರುವವರು | | | |
| 3-6 ವರ್ಷ ಅಂಗನವಾಡಿ/ಪೂರ್ವ ಪ್ರಾಥಮಿಕ ಶಿಕ್ಷಣದಿಂದ ಹೊರಗಿರುವ ಮಕ್ಕಳು | | | |
| 6-14 ವರ್ಷ ಶಾಲೆಯಿಂದ ಹೊರಗಿರುವ ಮಕ್ಕಳು | | | |
| 14-18 ವರ್ಷ ಶಿಕ್ಷಣದ ಮುಖ್ಯವಾಹಿನಿಯಿಂದ ಹೊರಗಿರುವ ಮಕ್ಕಳು | | | |
| ಅನಾಥ ಮಕ್ಕಳು | | | |
| ಏಕ ಪೋಷಕ ಮಕ್ಕಳು | | | |
| ಕಾಣೆಯಾದ, ಓಡಿಹೋದ, ಸಾಗಣೆಯಾದ ಮಕ್ಕಳ ಸಂಖ್ಯೆ | | | |
| ಮಕ್ಕಳು ಕಣ್ಮರೆಯಾದ ಬಗ್ಗೆ ಪೋಲೀಸ್ ದೂರು ದಾಖಲು ಮಾಡಿದ ಪ್ರಕರಣಗಳು | | | |

## ಮಕ್ಕಳ ಅಭಿವೃದ್ಧಿ

| ಅಂಗನವಾಡಿಗಳ ಸಂಖ್ಯೆ | ಗಂಡು | ಹೆಣ್ಣು | ಒಟ್ಟು |
|---|---|---|---|
| ಅಂಗನವಾಡಿಗೆ ದಾಖಲಾದ ಮಕ್ಕಳು | | | |
| ಇತರ ಪ್ರಾಥಮಿಕ ಪೂರ್ವ ಶಾಲೆಗಳಿಗೆ ದಾಖಲಾದ ಮಕ್ಕಳು | | | |
| ಹಾಜರಾಗುತ್ತಿರುವ ಮಕ್ಕಳ ಸಂಖ್ಯೆ | | | |

## ಪ್ರಾಥಮಿಕ ಶಾಲೆಗಳ ವಿವರ

| ಪ್ರಾಥಮಿಕ ಶಾಲೆಗಳ ಸಂಖ್ಯೆ | ಗಂಡು | ಹೆಣ್ಣು | ಒಟ್ಟು |
|---|---|---|---|
| ಪ್ರಾಥಮಿಕ ಶಾಲಾ ಶಿಕ್ಷಕರ ಸಂಖ್ಯೆ | | | |
| ಪ್ರಾಥಮಿಕ ಶಾಲೆಗಳಿಗೆ ದಾಖಲಾದ ಮಕ್ಕಳು | | | |
| ಹಾಜರಾಗುತ್ತಿರುವ ಮಕ್ಕಳ ಸಂಖ್ಯೆ | | | |
| ಪ್ರೌಢ ಶಾಲೆಗೆ ದಾಖಲಾದ ಮಕ್ಕಳು | | | |
| ಹಾಜರಾಗುತ್ತಿರುವ ಮಕ್ಕಳು | | | |

**ಮಕ್ಕಳ ಹಕ್ಕುಗಳ ಗ್ರಾಮಸಭೆ ಆಯೋಜಿಸಯವಂತೆ ಕರ್ನಾಟಕ ಸರಕಾರ ಹೊರಡಿಸಿರುವ ಸುತ್ತೋಲೆ.**

**ಕರ್ನಾಟಕ ಸರಕಾರ**

**ಸಂಖ್ಯೆ: ಗ್ರಾಅಪ 367 ಗ್ರಾಪಂಅ 2006** **ಕರ್ನಾಟಕ ಸರಕಾರದ ಸಚಿವಾಲಯ**

**ಬಹುಮಹಡಿ ಕಟ್ಟಡ**
**ಬೆಂಗಳೂರು ದಿನಾಂಕ: 18–9–2006**

**ಸುತ್ತೋಲೆ**

ವಿಷಯ: ಮಕ್ಕಳ ಹಕ್ಕುಗಳನ್ನು ಕುರಿತು ಪ್ರತಿ ವರ್ಷ ನವೆಂಬರ್ ತಿಂಗಳಲ್ಲಿ "ಮಕ್ಕಳ ಗ್ರಾಮಸಭೆ" ಏರ್ಪಡಿಸುವ ಬಗ್ಗೆ.

*****

ವಿಶ್ವ ಸಂಸ್ಥೆಯ ಮಕ್ಕಳ ಹಕ್ಕುಗಳ ಒಡಂಡಿಕೆಯನ್ನು ಜಾರಿಗೊಳಿಸಲು ಕೇಂದ್ರ ಸರ್ಕಾರವು 1992ರ ವಿಶ್ವಸಂಸ್ಥೆಗೆ ತನ್ನ ಬದ್ಧತೆಯನ್ನು ವ್ಯಕ್ತ ಪಡಿಸಿರುತ್ತದೆ. ಮಕ್ಕಳ ಉಳಿವು, ರಕ್ಷಣೆ ಅಭಿವೃದ್ಧಿ ಮತ್ತು ಭಾಗವಹಿಸುವಿಕೆಯ ಹಕ್ಕನ್ನು ಜಾರಿಗೊಳಿಸುವಲ್ಲಿ ಸ್ಥಳೀಯ ಸರ್ಕಾರಗಳಾದ ಗ್ರಾಮ ಪಂಚಾಯತಿಗಳ ಪಾತ್ರ ಮಹತ್ತರವಾಗಿದೆ. ಗ್ರಾಮ ಪಂಚಾಯತಿಗಳು ನಡೆಸುವ ಗ್ರಾಮ ಸಭೆಗಳಲ್ಲಿ ಮಕ್ಕಳ ಸ್ಥಿತಿಗತಿ ಅವರುಗಳ ಅಭಿವೃದ್ಧಿ ಹಾಗೂ ಅವರುಗಳಿಗೆ ಸಂವಿಧಾನಾತ್ಮಕವಾಗಿ ಒದಗಿಸಿರುವ ಹಕ್ಕುಗಳ ಬಗ್ಗೆ ಗ್ರಾಮ ಪಂಚಾಯತಿಗಳು ವಿಶೇಷ 'ವಾಗಿ ಚರ್ಚಿಸಿ ಗ್ರಾಮಸ್ಥರುಗಳಿಗೆ ಅವರುಗಳ ಜವಾಬ್ದಾರಿಯನ್ನು ತಿಳಿಸುವ ಗುರುತರ ಹೊಣೆಗಾರಿಕೆ ಗ್ರಾಮ ಪಂಚಾಯತಿಗಳ ಮೇಲಿರುತ್ತದೆ. ಆದುದರಿಂದ ಪ್ರತಿ ವರ್ಷ ನವೆಂಬರ್ 13 ರಿಂದ 30 ರವರೆಗೆ ಮಕ್ಕಳ ಹಕ್ಕುಗಳ ಸಪ್ತಾಹವನ್ನು ಹಮ್ಮಿಕೊಳ್ಳುವಂತೆ ಹಾಗೂ ಈ ದಿನಗಳಲ್ಲಿ ವಿಶೇಷವಾಗಿ ಒಂದು ದಿನ ಮಕ್ಕಳ ಹಕ್ಕುಗಳ ಬಗ್ಗೆ ಗ್ರಾಮಸ್ಥರು, ಪಾಲಕರು, ವಿವಿಧ ಇಲಾಖೆಯ ಅಧಿಕಾರಿಗಳು ಹಾಗೂ ಮಕ್ಕಳ ಗ್ರಾಮಸಭೆಗಳನ್ನು ಏರ್ಪಡಿಸಲು ಸರ್ಕಾರ ನಿರ್ಧರಿಸುತ್ತದೆ. ಈ ಗ್ರಾಮಸಭೆಯಲ್ಲಿ ವಿಶೇಷವಾಗಿ ಕೆಳಕಂಡ ಅಂಶಗಳನ್ನು ಸಹ ಚರ್ಚಿಸಲು ಸೂಚಿಸಲಾಗಿದೆ.

- ಮಕ್ಕಳ ಆರೋಗ್ಯಕರ ಬೆಳವಣಿಗೆಗೆ ಪೌಷ್ಟಿಕ ಆಹಾರವನ್ನು ಒದಗಿಸುವುದು.
- ಮಕ್ಕಳ ಬೌದ್ಧಿಕ ಬೆಳವಣಿಗೆಗೆ ಆಟ-ಪಾಠಗಳ ವ್ಯವಸ್ಥೆಯನ್ನು ವೈಜ್ಞಾನಿಕವಾಗಿ ರೂಪಿಸುವುದು.
- ಪ್ರತಿ 3 ವರ್ಷದಿಂದ 6 ವರ್ಷದ ಎಲ್ಲಾ ಮಕ್ಕಳು ಅಂಗನವಾಡಿ ಹಾಗೂ ಶಾಲೆಗಳಲ್ಲಿ ದಾಖಲಾಗಿ ಶಿಕ್ಷಣವನ್ನು ಪ್ರಾರಂಭಿಸುವುದು.
- ಜೀತ ಪದ್ಧತಿ ಹಾಗೂ ಕೃಷಿ ಕಾರ್ಮಿಕ ವೃತ್ತಿಯಲ್ಲಿ ಮಕ್ಕಳನ್ನು ತೊಡಗಿಸುವವರ ವಿರುದ್ಧ ಜಾಗೃತಿ ಮೂಡಿಸುವುದು.
- ಹೆಣ್ಣು ಮಕ್ಕಳ ಪೋಷಣೆ ಹಾಗೂ ರಕ್ಷಣೆ.

ಮೇಲ್ಕಂಡ ಅಂಶಗಳನ್ನಲ್ಲದೇ ಮಕ್ಕಳ ಪರವಾಗಿ ಸರ್ಕಾರ ಅನುಷ್ಟಾನಗೊಳಿಸುತ್ತಿರುವ ಯೋಜನೆಯ ಕಾರ್ಯಕ್ರಮಗಳನ್ನು ವಿವರವಾಗಿ ಚರ್ಚಿಸಿ ಗ್ರಾಮಸ್ಥರು ಹಾಗೂ ಪೋಷಕರುಗಳಿಗೆ ಹೆಚ್ಚಿನ ತಿಳುವಳಿಕೆ ನೀಡುವ ಕಾರ್ಯಕ್ರಮವಾಗಿರಬೇಕು. ಈ ಮಕ್ಕಳ ಹಕ್ಕುಗಳ ವಿಶೇಷ ಗ್ರಾಮಸಭೆಗೆ ಆಯಾ ಗ್ರಾಮಪಂಚಾಯತಿ ವ್ಯಾಪ್ತಿಯ ಮಕ್ಕಳು, ಪೋಷಕರು, ಅಂಗನವಾಡಿ ಕಾರ್ಯಕರ್ತೆಯರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸೂಪರ್‌ವೈಸರ್‌ಗಳು, ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರು, ಎಲ್ಲಾ ಶಾಲಾ ಶಿಕ್ಷಕಿಯರು, ಶಿಕ್ಷಕರು, ಪೋಲೀಸ್ ಅಧಿಕಾರಿಗಳು, ಶಾಲಾ ಅಭಿವೃದ್ಧಿ ಮತ್ತು ಉಸ್ತುವಾರಿ ಸಮಿತಿಯ ಸದಸ್ಯರು, ಸ್ಥಳೀಯ ಸ್ವಯಂಸೇವಾ ಸಂಘಗಳ ಪ್ರತಿನಿಧಿಗಳು ಕಡ್ಡಾಯವಾಗಿ ಹಾಜರಾಗಲು ವ್ಯವಸ್ಥೆ ರೂಪಿಸಬೇಕು.

ಎಲ್ಲಾ ಗ್ರಾಮಪಂಚಾಯತಿಗಳು ತಮ್ಮ ವ್ಯಾಪ್ತಿಯಲ್ಲಿರುವ ಮಕ್ಕಳ ಬಗ್ಗೆ ಅಂಕಿಸಂಖ್ಯೆ ಹಾಗೂ ಇನ್ನಿತರ ಮಾಹಿತಿಯನ್ನು ಕ್ರೋಢೀಕರಿಸಿಕೊಳ್ಳುವ ವ್ಯವಸ್ಥೆಯನ್ನು ರೂಪಿಸಿಕೊಳ್ಳಬೇಕು. ಎಲ್ಲಾ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ವೈಯುಕ್ತಿಯ ಗಮನಹರಿಸಿ ಮಕ್ಕಳ ಹಕ್ಕುಗಳ ವಿಶೇಷ ಗ್ರಾಮಸಭೆಯನ್ನು ಏರ್ಪಡಿಸಬೇಕೆಂದು ನಿರ್ದೇಶಿಸಲಾಗಿದೆ. ಈ ಬಗ್ಗೆ ಸರ್ಕಾರಕ್ಕೆ ವರದಿಯನ್ನು ಸಲ್ಲಿಸುವಂತೆ ಸೂಚಿಸಲಾಗಿದೆ.

ಸಹಿ/- (ಕೆ.ಎಸ್.ಶಾಮಸುಂದರ)
ಸರ್ಕಾರದ ಅಧೀನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ,

ಗೆ,

- ಎಲ್ಲಾ ಜಿಲ್ಲಾ ಪಂಚಾಯ್ತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ.
- ಎಲ್ಲಾ ಕಾರ್ಯನಿರ್ವಾಹಕ ಅಧಿಕಾರಿಗಳು, ಎಲ್ಲಾ ತಾಲ್ಲೂಕು ಪಂಚಾಯ್ತಿ.
- ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಯವರ ಮಾಹಿತಿಗಾಗಿ.
- ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಪ್ರಧಾನ ಕಾರ್ಯದರ್ಶಿ ಹಾಗೂ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಯವರಿಗೆ.

**(ಎಲ್ಲಾ ಕಾರ್ಯನಿರ್ವಾಹಕ ಅಧಿಕಾರಿಗಳು ಈ ಸುತ್ತೋಲೆಯ ಪ್ರತಿಯನ್ನು ತಮ್ಮ ಆಡಳಿತ ವ್ಯಾಪ್ತಿಯ ಗ್ರಾಮ ಪಂಚಾಯತಿಗಳಿಗೆ ಕಳುಹಿಸಲು ಹಾಗೂ ಪ್ರತಿ ವರ್ಷ ನವೆಂಬರ್ ಮಾಹೆಯಲ್ಲಿ ಮಕ್ಕಳ ಗ್ರಾಮಸಭೆಯನ್ನು ಏರ್ಪಡಿಸಲು ಜವಾಬ್ದಾರರಾಗಿರುತ್ತಾರೆ. ಈ ಬಗ್ಗೆ ಕಾರ್ಯವ್ಯವಸ್ಥೆಯನ್ನು ರೂಪಿಸಿ ಸಂಬಂಧಿಸಿದ ಜಿಲ್ಲಾ ಪಂಚಾಯ್ತಿಗಳ ಮುಖಾಂತರ ಸರ್ಕಾರಕ್ಕೆ ವರದಿ ಕೊಡುವಂತೆ ನಿರ್ದೇಶಿಸಲಾಗಿದೆ.)**

unicef

# "ಮಕ್ಕಳ ಹಕ್ಕುಗಳ ವಿಶೇಷ ಗ್ರಾಮ ಸಭೆ"
# ಅಭಿವೃದ್ಧಿಗಾಗಿ ಮಕ್ಕಳ ಹಕ್ಕುಗಳ ಗ್ರಾಮ ಸಭೆ



## ಮಕ್ಕಳ ರಕ್ಷಣೆ ನಮ್ಮೆಲ್ಲರ ಹೊಣೆ






**ಪ್ರಕಟಣೆ**

ಜಿಲ್ಲಾಧಿಕಾರಿಗಳ ಕಛೇರಿ [(☎) 08539–220844],
ಜಿಲ್ಲಾ ಪಂಚಾಯತ್ (☎) 08539–221043/220002,
ಪೋಲೀಸ್ ಇಲಾಖೆ (☎) 08539–230111/100,
ಸಾರ್ವಜನಿಕ ಶಿಕ್ಷಣ ಇಲಾಖೆ (☎) 08539–221303/222243,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ (□) 08539–222703,
ಕಾರ್ಮಿಕ ಇಲಾಖೆ (☎) 08539–222590],
ಮಕ್ಕಳ ಕಲ್ಯಾಣ ಸಮಿತಿ (☎): 08539–200755].
ಹಾಗೂ
ಯುನಿಸೆಫ್–ಮಕ್ಕಳ ಸಂರಕ್ಷಣಾ ಯೋಜನೆ (☎): 08539– 225006,

ಮಕ್ಕಳ ಹಕ್ಕುಗಳ ಒಡಂಬಡಿಕೆಯನ್ನು 1989 ನವೆಂಬರ್ ತಿಂಗಳಲ್ಲಿ ಅಂಗೀಕರಿಸಲಾಯಿತು. ಒಡಂಬಡಿಕೆಯಲ್ಲಿ ಸೂಚಿಸಿರುವಂತೆ ವಿಶ್ವದ ಎಲ್ಲಾ 18 ವರ್ಷದ ಒಳಗಿನ ಮಕ್ಕಳಿಗೆ ಬದುಕುವ, ಅಭಿವೃದ್ಧಿ ಹೊಂದುವ, ರಕ್ಷಣೆಯ ಹಾಗೂ ಭಾಗವಹಿಸುವ ಹಕ್ಕುಗಳನ್ನು ಜಾರಿ ಮಾಡುವುದು ಸರ್ಕಾರಗಳ ಆದ್ಯ ಕರ್ತವ್ಯವಾಗಿದೆ. ಈ ನಿಟ್ಟಿನಲ್ಲಿ ಭಾರತ ಸರ್ಕಾರ ಮಕ್ಕಳ ಹಕ್ಕುಗಳ ಜಾರಿಗಾಗಿ ಹಲವಾರು ನೀತಿ, ನಿಯಮ, ಯೋಜನೆಗಳನ್ನು ಜಾರಿಗೊಳಿಸಿದೆ. ಪ್ರತೀ ವರ್ಷ ನವೆಂಬರ್ ತಿಂಗಳಲ್ಲಿ ಮಕ್ಕಳ ಹಕ್ಕುಗಳ ಗ್ರಾಮಸಭೆಯನ್ನು ನಡೆಸಬೇಕೆಂದು ಕರ್ನಾಟಕ ಘನ ಸರ್ಕಾರದ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸುತ್ತೋಲೆ ಹೊರಡಿಸಿದೆ. (ಸುತ್ತೋಲೆ ಸಂಖ್ಯೆ : ಗ್ರಾಅಪ 367 ಗ್ರಾಪಂಮ 2006 ದಿನಾಂಕ 18-9-2006 ಮತ್ತು ಗ್ರಾಪ 638 ಗ್ರಾಪಂಮ 2007 ದಿನಾಂಕ : 30-10-2007)

## ಮಕ್ಕಳ ಹಕ್ಕುಗಳ ಗ್ರಾಮಸಭೆ

ಮಕ್ಕಳು ತಮ್ಮ ಹಕ್ಕುಗಳನ್ನು ಅನುಭವಿಸಿ ಸಂತೋಷದಿಂದ ಬಾಲ್ಯವನ್ನು ಸುಂದರವಾಗಿ ಮುಗಿಸಿದರೆ ಮಾತ್ರ ಸಮಾಜದ ಅಭಿವೃದ್ಧಿ ಸಾಧ್ಯ ಎನ್ನುವುದನ್ನು ಅರಿತು ಪ್ರತಿಯೊಂದು ಮಗುವಿನ ಹಕ್ಕುಗಳ ಸಂರಕ್ಷಣೆ ಗ್ರಾಮಪಂಚಾಯತ್ ಪ್ರಥಮ ಕರ್ತವ್ಯ. ಅಂದರೆ ತಾಯಿಯ ಗರ್ಭದಲ್ಲಿ ಗರ್ಭಾಂಕುರಗೊಂಡು 18 ವರ್ಷ ತುಂಬುವವರೆಗಿನ ಪ್ರತೀ ಮಗುವಿನ ರಕ್ಷಣೆಯನ್ನು ಗ್ರಾಮ ಪಂಚಾಯತ್ ಮಾಡಬೇಕು. ಅದಕ್ಕಾಗಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಪ್ರತೀ ಗ್ರಾಮಗಳಿಂದ 0 ರಿಂದ 18 ವರ್ಷದೊಳಗಿನ ಎಲ್ಲಾ ಮಕ್ಕಳ ಅಂಕಿ ಅಂಶಗಳನ್ನು ಸಂಗ್ರಹಿಸಿ ಕ್ರೋಢೀಕರಿಸಿ ದೂರದೃಷ್ಟಿ ಇಟ್ಟುಕೊಂಡು ಪ್ರತಿಯೊಂದು ಯೋಜನೆಗಳನ್ನು ರೂಪಿಸಿಕೊಳ್ಳಬೇಕು. ಆವಾಗ ಮಾತ್ರ ನಮ್ಮ ಗ್ರಾಮ ಪಂಚಾಯತ್‌ಗಳು 'ಮಕ್ಕಳ ಸ್ನೇಹಿ ಗ್ರಾಮ ಪಂಚಾಯತ್' ಗಳಾಗಲು ಸಾಧ್ಯ.






ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಅಭಿವೃದ್ಧಿ ಪರವಾಗಿ ಕಾರ್ಯನಿರ್ವಹಿಸುವ ಪ್ರತಿಯೊಬ್ಬರು ಒಂದುಕಡೆ ಸೇರಿ ಮಕ್ಕಳ ಬಗ್ಗೆ ಚರ್ಚಿಸುವ ವೇದಿಕೆಯೇ ಮಕ್ಕಳ ಹಕ್ಕುಗಳ ಗ್ರಾಮಸಭೆ. ಮಕ್ಕಳನ್ನು ಈ ಪ್ರಕ್ರಿಯೆ ಭಾಗವನ್ನಾಗಿಸುವುದು ಬಹು ಮುಖ್ಯ. ಇಲ್ಲಿ ಚರ್ಚೆಯ ವಿಷಯ ಗ್ರಾಮ ಪಂಚಾಯತ್ ವ್ಯಾಪ್ತಿಯ 0-18 ವರ್ಷದ ಎಲ್ಲಾ ಮಕ್ಕಳ ಎಲ್ಲಾ ಹಕ್ಕುಗಳ ಜಾರಿ ಅವುಗಳಲ್ಲಿ ಉಂಟಾಗಿರುವ ತೊಡಕುಗಳು, ಅವುಗಳನ್ನು ಮೆಟ್ಟಿ ನಿಲ್ಲಲು ಸೂಕ್ತವಾದ ಯೋಜನೆಗಳ ತಯಾರಿ ಮತ್ತು ಅದರ ಅನುಷ್ಠಾನ. ಮಕ್ಕಳ ಹಕ್ಕುಗಳ ಗ್ರಾಮ ಸಭೆ ಎಂದರೆ ಈ ಎಲ್ಲಾ ಪ್ರಕ್ರಿಯೆಗಳು ಇದಕ್ಕಾಗಿ ಮಕ್ಕಳ ಅಭಿವೃದ್ಧಿಗೆ ಸಹಕರಿಸುವ ಎಲ್ಲರೂ ಗ್ರಾಮ ಪಂಚಾಯತ್ ಮಟ್ಟದಲ್ಲಿ 0-18 ವರ್ಷದ ಎಲ್ಲಾ ಮಕ್ಕಳ ಅಂಕಿ-ಅಂಶಗಳನ್ನು ಇಟ್ಟುಕೊಂಡು ಮಕ್ಕಳ ಸ್ಥಿತಿ-ಗತಿ ಬಗ್ಗೆ ಅವಲೋಕಿಸಿ ಗ್ರಾಮಸ್ಥರು ಮಕ್ಕಳು ಸೇರಿಕೊಂಡು ಆರೋಗ್ಯ ಪೂರ್ಣವಾದ ಚರ್ಚೆಯಲ್ಲಿ ತೊಡಗಿ ಸೂಕ್ತ ನಿರ್ಧಾರವನ್ನು ತೆಗೆದುಕೊಳ್ಳುವುದು ಅಗತ್ಯ.

### ಮಕ್ಕಳ ಹಕ್ಕುಗಳ ವಿಶೇಷ ಗ್ರಾಮ ಸಭೆಯ ಉದ್ದೇಶಗಳು.

- ಗ್ರಾಮ ಪಂಚಾಯತಿ ಮಿತಿಯಲ್ಲಿ ಬರುವ ಎಲ್ಲಾ ಸೇವಾ ನಿರ್ವಾಹಕರು ಒಗ್ಗೂಡಿ ತಮ್ಮ ಇಲಾಖೆಗೆ ಸಂಬಂಧಿಸಿದಂತೆ ಮಕ್ಕಳ ಮಾಹಿತಿಯನ್ನು ಸಂಗ್ರಹಿಸುವುದು ಮತ್ತು ಹಂಚಿಕೊಳ್ಳುವುದು.
- ಈ ಮಾಹಿತಿ ಮತ್ತು ಮಕ್ಕಳ ಹಕ್ಕುಗಳ ವಿಶೇಷ ಗ್ರಾಮಸಭೆಯಲ್ಲಿ ಕಂಡುಬಂದ ವಿಷಯಗಳ ಆಧಾರದ ಮೇಲೆ ಗ್ರಾಮ ಪಂಚಾಯತಿಯ ಎಲ್ಲಾ ಹಳ್ಳಿಗಳು/ವಾರ್ಡ್‌ಗಳಿಗೆ ನಿರ್ದಿಷ್ಟ ಮಕ್ಕಳ ಅಭಿವೃದ್ಧಿ ಯೋಜನೆಯ ನಿರ್ಮಾಣ.
- ಆಯಾ ಚುನಾಯಿತ ಗ್ರಾಮ ಪಂಚಾಯತಿ ಸದಸ್ಯರು ತಮ್ಮ ವಾರ್ಡ್ ಸಭೆಯಲ್ಲಿ ಮಕ್ಕಳ ಮಾಹಿತಿ ಆಧರಿಸಿ ಚರ್ಚೆ ನಡೆಸುವುದು ಹಾಗೂ ಕ್ರಮಗಳನ್ನು ಕೈಗೊಳ್ಳುವುದು.
- ಗ್ರಾಮ ಪಂಚಾಯಿತಿ ಅಭಿವೃದ್ಧಿ ಯೋಜನೆಯಲ್ಲಿ ಭೌತಿಕ ಅಭಿವೃದ್ಧಿ ಮತ್ತು ಆರ್ಥಿಕ ಅಭಿವೃದ್ಧಿಗೆ ಗಮನ ನೀಡುವುದರ ಜೊತೆಗೆ ಮಕ್ಕಳ ಆರೋಗ್ಯ, ಶಿಕ್ಷಣ, ರಕ್ಷಣೆ, ಅಭಿವೃದ್ಧಿ ಮತ್ತು ಭಾಗವಹಿಸುವಿಕೆಗೆ ಆದ್ಯತೆ ನೀಡುವುದು.
- ಮಕ್ಕಳ ಹಕ್ಕುಗಳ ರಕ್ಷಣೆಗೆ ವ್ಯಾಪಕ ಚರ್ಚೆ ಹಾಗೂ ಪ್ರಚಾರ

### ಮಕ್ಕಳ ಹಕ್ಕುಗಳ ಗ್ರಾಮಸಭೆಯ ಪೂರ್ವತಯಾರಿ

- ಮಕ್ಕಳ ಹಕ್ಕುಗಳ ಗ್ರಾಮಸಭೆಯನ್ನು ಪ್ರತೀ ವರ್ಷ ನವೆಂಬರ್ ತಿಂಗಳಲ್ಲಿ ಹಮ್ಮಿಕೊಳ್ಳುವುದು ಆಯಾ ಗ್ರಾಮ ಪಂಚಾಯತ್‌ಗಳ ಕರ್ತವ್ಯ.
- ಗ್ರಾಮ ಪಂಚಾಯತ್ ಅಧ್ಯಕ್ಷರು ಮತ್ತು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಮುಖ್ಯವಾಗಿ ಮಕ್ಕಳ ಹಕ್ಕುಗಳ ಗ್ರಾಮಸಭೆಯ ಔಚಿತ್ಯ, ಮಹತ್ವದ ಬಗ್ಗೆ ಅರಿತುಕೊಂಡು ಗ್ರಾಮಸಭೆ, ಗ್ರಾಮಸಭೆಯ ನಂತರದ ಸಭೆ ತೀರ್ಮಾನಗಳ ಅನುಷ್ಠಾನ ಮಾಡಬೇಕು.





- ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಸೇವೆ-ಯನ್ನು ಒದಗಿಸುವ ಅಧಿಕಾರಿಗಳು, ಸಿಬ್ಬಂದಿಗಳು, ಸಂಘಸಂಸ್ಥೆಗಳ ಪ್ರತಿನಿಧಿಗಳು ಒಂದು ಕಡೆ ಸೇರಿಸಿಕೊಂಡು 0-18 ವರ್ಷದ ಒಳಗಿನ ಎಲ್ಲಾ ಮಕ್ಕಳ ಅಂಕಿಅಂಶಗಳನ್ನು ಸಂಗ್ರಹಿಸುವುದು.
- ಗ್ರಾಮ ಸಭೆ ನಡೆಸುವ ದಿನಾಂಕವನ್ನು ನಿಗದಿ ಪಡಿಸಿ ವ್ಯಾಪಕ ಪ್ರಚಾರ ಮಾಡುವುದು.
- ಈಗಾಗಲೇ ನಡೆದಿರುವ ಗ್ರಾಮ ಸಭೆಗಳಲ್ಲಿ ಮಕ್ಕಳು/ಭಾಗವಹಿಸಿದವರು ಕೇಳಿರುವ ಪ್ರಶ್ನೆ/ ಸಮಸ್ಯೆಗಳ ಮೇಲೆ ತೆಗೆದುಕೊಂಡ ಕ್ರಮ-ಗಳನ್ನು ಪಟ್ಟಿ ಮಾಡುವುದು. ಸಾಧಿಸಲು ಸಾಧ್ಯವಾಗದೇ ಇರುವ ಸಮಸ್ಯೆಗಳನ್ನು ಪುನರ್ ಪರಿಶೀಲನೆ ಮಾಡುವುದು.
- ಗ್ರಾಮ ಪಂಚಾಯತ್ ಮಕ್ಕಳ ಹಕ್ಕುಗಳ ರಕ್ಷಣಾ ಸಮಿತಿಯನ್ನು ರಚಿಸಿ ಅದರ ಮೂಲಕ ಮಕ್ಕಳ ಗ್ರಾಮ ಸಭೆಯನ್ನು ಹಮ್ಮಿಕೊಳ್ಳುವುದು.
- ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಸೇವೆ- ಯನ್ನು ಒದಗಿಸುವ ಅಧಿಕಾರಿಗಳು, ಸಿಬ್ಬಂದಿಗಳು, ಸಂಘಸಂಸ್ಥೆಗಳ ಪ್ರತಿನಿಧಿಗಳು ಒಂದು ಕಡೆ ಸೇರಿಸಿಕೊಂಡು 0-18 ವರ್ಷದ ಒಳಗಿನ ಎಲ್ಲಾ ಮಕ್ಕಳ ಆಂಕಿಅಂಶಗಳನ್ನು ಸಂಗ್ರಹಿಸುವುದು.
- ಗ್ರಾಮ ಸಭೆ ನಡೆಸುವ ದಿನಾಂಕವನ್ನು ನಿಗದಿ ಪಡಿಸಿ ವ್ಯಾಪಕ ಪ್ರಚಾರ ಮಾಡುವುದು.
- ಈಗಾಗಲೇ ನಡೆದಿರುವ ಗ್ರಾಮ ಸಭೆಗಳಲ್ಲಿ ಮಕ್ಕಳು/ಭಾಗವಹಿಸಿದವರು ಕೇಳಿರುವ ಪ್ರಶ್ನೆ/ ಸಮಸ್ಯೆಗಳ ಮೇಲೆ ತೆಗೆದುಕೊಂಡ ಕ್ರಮ- ಗಳನ್ನು ಪಟ್ಟಿ ಮಾಡುವುದು. ಸಾಧಿಸಲು ಸಾಧ್ಯವಾಗದೇ ಇರುವ ಸಮಸ್ಯೆಗಳನ್ನು ಪುನರ್ ಪರಿಶೀಲನೆ ಮಾಡುವುದು.
- ಗ್ರಾಮ ಪಂಚಾಯತ್ ಮಕ್ಕಳ ಹಕ್ಕುಗಳ ರಕ್ಷಣಾ ಸಮಿತಿಯನ್ನು ರಚಿಸಿ ಅದರ ಮೂಲಕ ಮಕ್ಕಳ ಗ್ರಾಮ ಸಭೆಯನ್ನು ಹಮ್ಮಿಕೊಳ್ಳುವುದು.
- ಶಾಲೆಗಳಲ್ಲಿ ರಚನೆಂ ಯಾಗಿರುವ ಮಕ್ಕಳ ಹಕ್ಕುಗಳ ಕ್ಲಬ್‌ನ ಸಭೆ ಕರೆದು ಗ್ರಾಮ ಸಭೆಯ ಬಗ್ಗೆ ತಿಳಿಸುವುದು, ಗ್ರಾಮದ ಎಲ್ಲಾ ಮಕ್ಕಳ ದಿನಾಂಕವನ್ನು ನಿಗದಿ ಪಡಿಸಿ ವ್ಯಾಪಕ ಪ್ರಚಾರ ಮಾಡುವುದು.
- ಈಗಾಗಲೇ ನಡೆದಿರುವ ಗ್ರಾಮ ಸಭೆಗಳಲ್ಲಿ ಮಕ್ಕಳು/ ಭಾಗವಹಿಸಿದವರು ಕೇಳಿರುವ ಪ್ರಶ್ನೆ/ ಸಮಸ್ಯೆಗಳ ಮೇಲೆ ತೆಗೆದುಕೊಂಡ ಕ್ರಮ- ಗಳನ್ನು ಪಟ್ಟಿ ಮಾಡುವುದು. ಸಾಧಿಸಲು ಸಾಧ್ಯವಾಗದೇ ಇರುವ ಸಮಸ್ಯೆಗಳನ್ನು ಪುನರ್ ಪರಿಶೀಲನೆ ಮಾಡುವುದು.
- ಗ್ರಾಮ ಪಂಚಾಯತ್ ಮಕ್ಕಳ ಹಕ್ಕುಗಳ ರಕ್ಷಣಾ ಸಮಿತಿಯನ್ನು ರಚಿಸಿ ಅದರ ಮೂಲಕ ಮಕ್ಕಳ ಗ್ರಾಮ ಸಭೆಯನ್ನು ಹಮ್ಮಿಕೊಳ್ಳುವುದು.
- ಶಾಲೆಗಳಲ್ಲಿ ರಚನೆಯಾಗಿರುವ ಮಕ್ಕಳ ಹಕ್ಕುಗಳ ಕ್ಲಬ್‌ನ ಸಭೆ ಕರೆದು ಗ್ರಾಮ ಸಭೆಯ ಬಗ್ಗೆ ತಿಳಿಸುವುದು, ಗ್ರಾಮದ ಎಲ್ಲಾ ಮಕ್ಕಳ ಸಮಸ್ಯೆಗಳನ್ನು ಪಟ್ಟಿ ಮಾಡಲು ಸೂಚಿಸುವುದು.

### ಗ್ರಾಮ ಸಭೆ ನಡೆಸುವ ವಿಧಾನ





❖ ಗ್ರಾಮ ಸಭೆಗೆ ಸೂಕ್ತವಾದ ಜಾಗವನ್ನು ನಿಗದಿ ಪಡಿಸಿ, ಅಲ್ಲಿ ಎಲ್ಲರೂ ಸೇರಿದ ನಂತರ ಮಕ್ಕಳ ಹಕ್ಕುಗಳ ಬಗ್ಗೆ ಜಾಗೃತಿಯನ್ನು ಮೂಡಿಸಲು ಜಾಥಾವನ್ನು ಹಮ್ಮಿಕೊಳ್ಳುವುದು.
❖ ಗ್ರಾಮ ಸಭೆಯ ಉದ್ಘಾಟನಾ ಕಾರ್ಯಕ್ರಮವನ್ನು ಅತ್ಯಂತ ಸರಳವಾಗಿ ಕಡಿಮೆ ಸಮಯದಲ್ಲಿ ಹಮ್ಮಿಕೊಳ್ಳುವುದು.
❖ ಉದ್ಘಾಟನೆಯ ನಂತರ ಕಳೆದ ವರ್ಷ ಹಮ್ಮಿಕೊಳ್ಳಲಾದ ಗ್ರಾಮ ಸಭೆಯ ನಡಾವಳಿ ಮತ್ತು ಅದರ ಬಗ್ಗೆ ತೆಗೆದುಕೊಂಡ ಕ್ರಮಗಳ ಬಗ್ಗೆ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ವರದಿಯನ್ನು ಮಂಡಿಸುವುದು.
❖ ಭಾಗವಹಿಸಿದ ಮಕ್ಕಳು/ಪೋಷಕರು/ ಗ್ರಾಮಸ್ಥರು ಮಕ್ಕಳ ಹಕ್ಕುಗಳ ಬಗ್ಗೆ ಗ್ರಾಮದಲ್ಲಿ ಇರುವ ಸಮಸ್ಯೆಗಳನ್ನು ತಿಳಿಸುವುದು/ ಚೀಟಿಯಲ್ಲಿ ಬರೆದು ಕೊಡುವುದು.
❖ ಬಂದಿರುವ ಎಲ್ಲಾ ಸಮಸ್ಯೆಗಳನ್ನು ಕ್ರೋಢೀಕರಿಸಿ ಗ್ರಾಮ ಪಂಚಾಯತ್ ನಿರ್ಧಾರ ತೆಗೆದುಕೊಂಡು ಸಭೆಗೆ ತಿಳಿಸುವುದು.
❖ ಉದ್ಘಾಟಕರು /ಅಥಿತಿಗಳ /ಉಪನ್ಯಾಸಕರ ಭಾಷಣ

### ಮಕ್ಕಳ ವಿಶೇಷ ಗ್ರಾಮ ಸಭೆಯಲ್ಲಿ ಚರ್ಚಿಸಬೇಕಾದ ವಿಷಯಗಳು





❖ ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆಗಟ್ಟಲು ಇತ್ತೀಚೆಗೆ ಸರಕಾರ ಹೊರಡಿಸಿರುವ ಸುತ್ತೋಲೆಯ ಅನುಷ್ಠಾನ.
❖ ಗ್ರಾಮಸಭೆ ನಡೆಯುವ ವರ್ಷದಲ್ಲಿ ಆದ ಒಟ್ಟು 18 ವರ್ಷದೊಳಗಿನವರ ವಿವಾಹಗಳ ಪ್ರಕರಣ-ಗಳು. ಈಗಾಗಲೇ ಆಗಿರುವ ಬಾಲ್ಯವಿವಾಹಕ್ಕೆ ಒಳಗಾಗಿರುವ ಮಕ್ಕಳ ಪುನರ್ವಸತಿ.
❖ ಬಾಲಕಾರ್ಮಿಕ ಮಕ್ಕಳು, ಶಾಲೆಗೆ ದಾಖಲಾ-ಗದೇ/ಶಾಲೆಗೆ ಗೈರು ಹಾಜರಾಗುವ ಮಕ್ಕಳು. ಕ್ರಾಸಿಂಗ್, ಕುರಿ/ದನ ಕಾಯುವ ಮಕ್ಕಳು, ಇಟ್ಟಿಗೆ ಭಟ್ಟಿ, ಖಾನಾವಳಿ, ಕಟ್ಟಡ ನಿರ್ಮಾಣ, ಕೋಳಿ ಸಾಕಾಣಿಕೆ, ಕಲ್ಲು ಒಡೆಯುವ ಕೆಲಸ, ಅಕ್ಕಿ ಗಿರಣಿ, ಎಣ್ಣೆ ಗಿರಣಿ, ಕೃಷಿ ಉದ್ದಿಮೆಗಳು, ಕ್ರಾಸಿಂಗ್, ಭತ್ತದ ಗದ್ದೆ / ಗ್ಯಾರೇಜ್ ಹೋಟೆಲ್, ಕುರಿ/ದನ ಮೇಯಿಸುವುದು ಇಂತಹ ದುಡಿಮೆ-ಯಲ್ಲಿರುವ, ಓಡಿಹೋದ, ಸಾಗಣೆ / ಮಾರಾಟ, ಕಣ್ಮರೆಯಾದ, ಚಿಂದಿ ಆಯುವ / ಭಿಕ್ಷೆ ಬೇಡುವ ದೇವದಾಸಿ ಪದ್ಧತಿಗೆ ಒಳಗಾಗಿ ಸಂಕಷ್ಟಕ್ಕೆ ಒಳಗಾಗಿರುವ ಮಕ್ಕಳಿಗೆ ಪುನರ್ವಸತಿ ಕಲ್ಪಿಸುವುದು.
❖ ಹೆಚ್.ಐ.ವಿ /ಏಡ್ಸ್ ಸೋಂಕಿತ ಮತ್ತು ಬಾಧಿತ ಮಕ್ಕಳಿಗೆ ಪುನರ್ವಸತಿ.
❖ ವಲಸೆ ತಡೆಗಟ್ಟುವುದು / ವಲಸೆ ಕುಟುಂಬದ ಮಕ್ಕಳಿಗೆ ಹಾಸ್ಟೇಲ್ ವ್ಯವಸ್ಥೆ.
❖ ಗರ್ಭಿಣಿಯರಿಗೆ ನೀಡಲಾದ ವೈದ್ಯಕೀಯ ನೆರವು.
❖ ಹೆರಿಗೆ ಸಮಯದಲ್ಲಿ ಮರಣ ಹೊಂದಿದ ತಾಯಂದಿರು ಮತ್ತು ಕಾರಣಗಳು. ತಡೆಗಟ್ಟಲು ಪರಿಹಾರ ಕ್ರಮಗಳು.
❖ ಅಪೌಷ್ಟಿಕತೆಯಿಂದ ಬಳಲುತ್ತಿರುವ ಮಕ್ಕಳ ಸಮಸ್ಯೆಗಳು, ಕಾರಣಗಳು, ನಿವಾರಿಸುವಲ್ಲಿ ಮಾಡಬೇಕಾದ ಕರ್ತವ್ಯಗಳು.
❖ ಜನನ/ಮರಣ ಮತ್ತು ಮದುವೆಗಳ ನೊಂದಣಿ.
❖ ಶಿಶು ಮರಣ ಕಾರಣ ಮತ್ತು ತಡೆಗಟ್ಟುವುದು.
❖ ಹೆಣ್ಣು ಭ್ರೂಣ ಹತ್ಯೆ ತಡೆ ಕ್ರಮಗಳು.
❖ ರೋಗ ನಿರೋಧಕ ಚುಚ್ಚು ಮದ್ದುಗಳು.
❖ ಶುದ್ಧ ನೀರಿನ ಲಭ್ಯತೆ ಮತ್ತು ಶೌಚಾಲಯ ವ್ಯವಸ್ಥೆ ಮತ್ತು ಬಳಕೆ.
❖ ಮಕ್ಕಳ ಅಭಿವೃದ್ಧಿ, ಕಲೆ, ಕ್ರೀಡೆಗೆ ಪಂಚಾಯತಿ ಮಟ್ಟದಲ್ಲಿ ಪ್ರೋತ್ಸಾಹ.
❖ ಅಂಗನವಾಡಿ ಮತ್ತು ಶಾಲೆಗಳಲ್ಲೂ ಮೂಲಭೂತ ಸೌಲಭ್ಯಗಳು. ಇವುಗಳ ಆವರಣದಲ್ಲಿ ಸ್ವಚ್ಛತೆಯನ್ನು ಕಾಪಾಡುವುದು.
❖ ವೈಯಕ್ತಿಕ ಶೌಚಾಲಯದ ನಿರ್ಮಾಣ.
❖ ಅಂಗವಿಕಲತೆಯುಳ್ಳ ಮಕ್ಕಳಿಗೆ ವಿಶೇಷ ಸೌಲಭ್ಯಗಳನ್ನು ಒದಗಿಸುವುದು.
❖ ಇತರೆ ಸ್ಥಳೀಯ ವಿಚಾರಗಳಿಗೆ ಒತ್ತು ನೀಡಿ ಚರ್ಚೆ ನಡೆಸುವುದು.

### ಪ್ರತೀ ಗ್ರಾಮ ಪಂಚಾಯತಿಗಳಲ್ಲಿ ಇರಬೇಕಾದ ಅಂಕಿ - ಅಂಶಗಳು

ಗ್ರಾಮ ಪಂಚಾಯತ್ ಹೆಸರು: ದಿನಾಂಕ:

| ಒಟ್ಟು ಜನಸಂಖ್ಯೆಯಲ್ಲಿ ಮಕ್ಕಳೆಷ್ಟು? | ಗಂಡು | ಹೆಣ್ಣು | ಒಟ್ಟು | % ಶೇಕಡ | ರೋಗ ನಿರೋಧಕ ಪಡೆದವರು |
|---|---|---|---|---|---|
| 0-3 ವರ್ಷ | | | | | |
| 3-6 ವರ್ಷ | | | | | |
| 6-14 ವರ್ಷ | | | | | |
| 14-18 ವರ್ಷ | | | | | |
| ಒಟ್ಟು ಮಕ್ಕಳು | | | | | |
| 18-21 ವರ್ಷ | | | | | |
| 21-60 ವರ್ಷ | | | | | |
| 60 ದಾಟಿದವರು | | | | | |
| ಒಟ್ಟು ಜನಸಂಖ್ಯೆ | | | | | |
| ಒಟ್ಟು ಮನೆಗಳ ಸಂಖ್ಯೆ | | | | | |